# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 765 |
| ಮಾನ್ಯ ಸದಸ್ಯರ ಹೆಸರು | ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 26-12-2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಹೆಚ್ಚುತ್ತಿರುವ ನಕಲಿ ವೈದ್ಯಕೀಯ ಕ್ಲಿನಿಕ್‌ಗಳ ಹಾವಳಿ ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ) | ಕರ್ನಾಟಕ ಆಯುರ್ವೇದಿಕ್ ಮತ್ತು ಯುನಾನಿ ವೈದ್ಯ ಮಂಡಳಿ (ಕೆಎಯುಪಿ) ವೈದ್ಯ ವೃತ್ತಿ ನಡೆಸಲು ಅರ್ಹತೆ ಹೊಂದಿಲ್ಲದ 7-8 ಸಾವಿರ ಮಂದಿಗೆ ವೈದ್ಯರು ನೋಂದಣಿ ಪ್ರಮಾಣ ಪತ್ರ ನೀಡಿರುವುದು ನಿಜವೇ; | ಹೌದು. |
| ಇ) | ಹೀಗೆ ಕೆಎಯುಪಿಯ ಅಧಿಕಾರಿಗಳು ಭ್ರಷ್ಟಾಚಾರ ಎಸಗಿ ಪರವಾನಗಿ ನೀಡಿದ್ದರಿಂದ, ಇಂದು ಪ್ರತಿ ಜಿಲ್ಲೆಯಲ್ಲಿ 2-3 ಸಾವಿರ ನಕಲಿ ವೈದ್ಯರು ಸೃಷ್ಟಿಯಾಗಿದ್ದು ಇಲಾಖೆ ಅಧಿಕಾರಿಗಳ ಮೇಲೆ ಮತ್ತು ನಕಲಿ ವೈದ್ಯರ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ: | 1991 ರಿಂದ 2007 ರವರೆಗೂ ಈ ಮಂಡಳಿಯಲ್ಲಿ 117 ನಕಲಿ ವೈದ್ಯ ವಿದ್ವಾನ್‌ರಿಗೆ ಹಿಂದಿನ ನೋಂದಣಾಧಿಕಾರಿಗಳು ಡಾ॥ ಹನುಮೇಗೌಡ ರವರು ನೋಂದಣಿ ನೀಡಿದ್ದು, ಆದೇಶ ಸಂಖ್ಯೆ: ಆಕುಕ/239/ಪಿಐಎಂ/2007, ದಿನಾಂಕ: 22/11/2007ರಲ್ಲಿ ಪ್ರಕರಣದ ತನಿಖೆ ನಡೆಸಲು ಲೋಕಾಯುಕ್ತಕ್ಕೆ ವಹಿಸಲಾಗಿದೆ. ಸದರಿ 117 ವೈದ್ಯ ವಿದ್ವಾನರ ವಿರುದ್ಧ ಉಪ್ಪಾರ್ ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಸಂಖ್ಯೆ:87/2008ರಲ್ಲಿ ದೂರು ದಾಖಲಿಸಲಾಗಿರುತ್ತದೆ. ನಂತರ ದಿನಾಂಕ:28/02/2008 ರಲ್ಲಿ ಎಲ್ಲಾ 117 ವೈದ್ಯ ವಿದ್ವಾನ್ ವೈದ್ಯರ ನೋಂದಣಿಯನ್ನು ರದ್ದುಪಡಿಸಿ ಆದೇಶ ಹೊರಡಿಸಲಾಗಿರುತ್ತದೆ.<br><br>ನೋಂದಣಿ ರದ್ದುಗೊಳಿಸಿರುವ ದಿನಾಂಕ:28.02.2008ರ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಂಖ್ಯೆ: 50673/2013 ಹಾಗೂ ರಿಟ್ ಅಪೀಲು 148/2021ನ್ನು ಸಲ್ಲಿಸಿರುತ್ತಾರೆ. ಆ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:29/03/2022ರಲ್ಲಿ ಅಂತಿಮ ಆದೇಶ ನೀಡಿದ್ದು, ಮತ್ತೊಮ್ಮೆ ರಾಜ್ಯ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಸೂಚಿಸಿ ಅರ್ಜಿಯನ್ನು ವಜಾಗೊಳಿಸಿರುತ್ತದೆ. |

| | | |
|---|---|---|
| | | ಇದನ್ನು ದೈನಂದಿನ ಪತ್ರಿಕೆ ಕನ್ನಡಪ್ರಭದಲ್ಲಿ ದಿನಾಂಕ;11/06/2021 ರಂದು 117 ನಕಲಿ ವೈದ್ಯ ವಿದ್ವಾನ್‌ರ ನೋಂದಣಿಯನ್ನು ರದ್ದುಗೊಳಿಸಿರುವ ಬಗ್ಗೆ ರಾಜ್ಯಾದ್ಯಂತ ಪ್ರಕಟಿಸಲಾಗಿದೆ ಹಾಗೂ ಸದರಿ 117 ವೈದ್ಯ ವಿದ್ವಾನ್‌ರ ಕೆ.ಪಿ.ಎಂ.ಇ. ಪರವಾನಿಗೆಯನ್ನು ರದ್ದುಪಡಿಸಲು ದಿನಾಂಕ:15/05/2021ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ತಿಳಿಸಲಾಗಿದೆ.<br><br>2017-18ನೇ ಸಾಲಿನಲ್ಲಿ ಈ ಮಂಡಳಿಯಲ್ಲಿ ನೋಂದಣಿಗೊಳ್ಳದ 11 ಜನ ಅನರ್ಹರಿಗೆ ಕೆ.ಪಿ.ಎಂ.ಇ ಅಡಿಯಲ್ಲಿ ಪರವಾನಿಗೆ ನೀಡಲು ಶಿಫಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಅಂದಿನ (2017-18) ನೋಂದಣಾಧಿಕಾರಿಯಾದ ಡಾ॥ ವಿನಾಯಕ್ ಅಂಬರ್‌ಕರ್ ಸುಭಾಷ್ ಇವರ ವಿರುದ್ಧ ಇಲಾಖೆ ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ಸದರಿ 11 ಜನ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.<br><br>2019-20ನೇ ಸಾಲಿನಲ್ಲಿ ನೊಂದಣಿಗೊಳ್ಳದ 13 ಜನ ಅನರ್ಹರಿಗೆ ಕೆ.ಪಿ.ಎಂ.ಇ ಅಡಿಯಲ್ಲಿ ಪರವಾನಿಗೆ ನೀಡಲು ಶಿಫಾರಸ್ಸು ಮಾಡಿರುವ ಅಂದಿನ ನೋಂದಣಾಧಿಕಾರಿಯಾದ ಡಾ॥ ವೆಂಕಟರಾಮಯ್ಯ ಇವರ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ. ಸದರಿ 13 ಜನ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಸೂಚಿಸಲಾಗಿದೆ. |

ಸಂಖ್ಯೆ: ಆಕುಕ 765 ಚುರಪ್ರ 2022

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು